## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ ಇವರ ನಡುವಳಿಕೆಗಳು, ಹಾವೇರಿ

**ವಿಷಯಃ** ಹಾವೇರಿ ಜಿಲ್ಲಾ ನ್ಯಾಯಾಂಗ ಇಲಾಖೆಯ ಶಿರಸ್ತೇದಾರ ಹುದ್ದೆಯ ಅಂತಿಮ ಪರಿಷ್ಕೃತ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸುವ ಕುರಿತು.

**ಓದಲಾಗಿದೆಃ**

1. ಗೌರವಾನ್ವಿತ ಭಾರತದ ಸರ್ವೋಚ್ಛ ನ್ಯಾಯಾಲಯ, ದೆಹಲಿ ಇವರ Civil Appeal No. 2368/2011, ದಿನಾಂಕಃ 09-02-2017
2. ಸರ್ಕಾರಿ ಆದೇಶ ಸಂಖ್ಯೆಃ DPAR 182 SRR 2011, ದಿನಾಂಕಃ 06-05-2017 ಮತ್ತು ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆಃ LCA-I. 147/2017, ದಿನಾಂಕಃ 30.06.2017.
3. ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ ಇವರ ಪತ್ರ ಸಂಖ್ಯೆ ಎಡಿಎಂ/1151/2017 ದಿನಾಂಕ 5-8-2017.
4. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ ಎಲ್.ಸಿ.ಎ-2 118/2017 ದಿನಾಂಕ 3-11-2017.
5. ಈ ನ್ಯಾಯಾಲಯದ ಪತ್ರ ಸಂಖ್ಯೆ 2767/2017, ದಿನಾಂಕಃ 03-11-2017.
6. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಇವರ ಇ-ಮೇಲ್ ದಿನಾಂಕ 20-11-2017.
7. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ ಎಲ್.ಸಿ.ಎ-2 118/2017 ದಿನಾಂಕ 29-11-2017.
8. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ ಎಲ್.ಸಿ.ಎ-2 47/2017 ದಿನಾಂಕ 10-01-2018.
9. ಈ ನ್ಯಾಯಾಲಯದ ಪತ್ರ ಸಂಖ್ಯೆ 146/2018, ದಿನಾಂಕಃ 12-01-2018.
10. ಕಚೇರಿ ಟಿಪ್ಪಣಿ ದಿನಾಂಕ 22-01-2018 ಹಾಗೂ ಅದರ ಮೇಲಾದ ಆದೇಶ.

******

**ಪ್ರಸ್ತಾವನೆಃ**

ಮೇಲೆ ಓದಲಾದ ಕ್ರಮ ಸಂಖ್ಯೆ 1 ಹಾಗೂ 2 ರ ಪ್ರಕಾರ ದಿನಾಂಕ 12-10-2001 ರಿಂದ 30-9-2017 ರವರೆಗೆ ಶಿರಸ್ತೇದಾರರ ಪರಿಷ್ಕೃತ ಸೇವಾ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಅಂತರ್ಜಾಲದಲ್ಲಿ ಪ್ರಕಟಿಸಿ ಈ ಜೇಷ್ಠತಾ ಪಟ್ಟಿಗೆ ದಿನಾಂಕ 19-01-2018 ರ ಒಳಗಾಗಿ ಆಧಾರ ಸಹಿತ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು, ಕೆಲವೊಂದು ಆಕ್ಷೇಪಣೆಗಳು ಈ ನ್ಯಾಯಾಲಯದಲ್ಲಿ ಸ್ವೀಕೃತವಾಗಿದ್ದು, ಅವುಗಳಿಗೆ ಉತ್ತರ ನೀಡಿ ಕ್ರಮ ಸಂಖ್ಯೆ 8 ರ ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇವರ ಮಾರ್ಗದರ್ಶನದಂತೆ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ ಜಿಲ್ಲಾ ನ್ಯಾಯಾಲಯದ ಅಂತರ್ಜಾಲದಲ್ಲಿ ಪ್ರಕಟಿಸಲು ಈ ಕೆಳಕಂಡ ಆದೇಶ;

**ಆದೇಶ ಸಂಖ್ಯೆ: 19/2018**
**ದಿನಾಂಕ: 22 ನೇ ಜನವರಿ 2018.**

ಹಾವೇರಿ ಜಿಲ್ಲಾ ಘಟಕದ ಶಿರಸ್ತೇದಾರರ ತಯಾರಿಸಿದ ಅಂತಿಮ ಪರಿಷ್ಕೃತ ಸೇವಾ ಜೇಷ್ಠತಾ ಪಟ್ಟಿಗೆ ಸ್ವೀಕರಿಸಿದ ಆಕ್ಷೇಪಣೆಗಳಿಗೆ ಈ ಕೆಳಗಿನಂತೆ ಉತ್ತರ ನೀಡಲಾಗಿದೆ.

1. ಶ್ರೀ ವಾಯ್. ಪಿ. ಪಾಟೀಲ, ಶಿರಸ್ತೇದಾರರು, ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಸವಣೂರ (ಪ್ರಸ್ತುತ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಶಿಗ್ಗಾಂವನಲ್ಲಿ ನಿಯೋಜನೆಯ ಮೇರೆಗೆ ಸೇವೆ ಸಲ್ಲಿಸುತ್ತಿದ್ದಾರೆ.)

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: DPAR 58 SRP -2003 ದಿನಾಂಕ 12-11-2003 ರಂದು ಅಧಿಸೂಚನೆ ಹೊರಡಿಸಿದ್ದು, **ಮಾನವೀಯತೆ ಆಧಾರ ಹಾಗೂ ಒಂದು ಸಾರಿ ನೇಮಕಾತಿ** ಆಧಾರದ ಮೇಲೆ ಗ್ರಾಮೀಣ ಕೃಪಾಂಕವನ್ನು ಹೊರತುಪಡಿಸಿದರೂ ಮೆರಿಟ್ ಮೂಲಕ ನೇಮಕಾತಿ ಆಗದೆ ಸೇವೆಯಿಂದ ವಜಾ ಗೊಂಡಿರುವ ಗ್ರಾಮೀಣ ಕೃಪಾಂಕ ಅಭ್ಯರ್ಥಿಗಳಿಗೆ ಮರು ನೇಮಕಾತಿ ನೀಡಿ ಆದೇಶ ನೀಡಿರುತ್ತಾರೆ. ಸದರಿ ಅಧಿಸೂಚನೆಯಲ್ಲಿ ಮರು ನೇಮಕಗೊಂಡ ಗ್ರಾಮೀಣ ಕೃಪಾಂಕ ಅಭ್ಯರ್ಥಿಗಳ ರಜೆ, ಸೇವಾ ಜೇಷ್ಠತೆ ನಿಗದಿಪಡಿಸುವ ಬಗ್ಗೆ ಕಂಡಿಕೆ 4 ರಲ್ಲಿ ನಿರ್ದೇಶನ ನೀಡಿರುತ್ತಾರೆ.

ಆಕ್ಷೇಪಣೆಯಲ್ಲಿ WP No. 11117/2009 ದಿನಾಂಕ 21-11-2011 ರ ಆದೇಶದಲ್ಲಿ ಸರ್ಕಾರ ಹೊರಡಿಸಿರುವ ಅಧಿಸೂಚನೆ ಕಂಡಿಕೆ -4 ರಲ್ಲಿ ವಿವರಿಸಿರುವಂತೆ ಮರುನೇಮಕಾತಿ ಹೊಂದಿದ ಗ್ರಾಮೀಣ ಕೃಪಾಂಕದ ಅಭ್ಯರ್ಥಿಗಳಿಗೆ ರಜೆ ಹಾಗೂ ಸೇವಾ ಜೇಷ್ಠತೆ ನಿಗದಿಪಡಿಸಲು ನಿರ್ದೇಶಿಸಿರುತ್ತಾರೆ. ಆದ್ದರಿಂದ ಶ್ರೀ ಎಮ್.ಹೆಚ್. ಕಡಕೋಳ, ಶ್ರೀ ಬಿ. ಶ್ರೀನಿವಾಸ, ಶ್ರೀ ಪಿ.ಎಮ್. ಮೊಗವೀರ, ಶ್ರೀ ಎಸ್.ಜೆ.ಪಕ್ಕೇದ, ಮತ್ತು ಶ್ರೀಮತಿ ಜೆ.ಎಸ್. ಹಂಚಿನಮನಿ ಇವರು ಗ್ರಾಮೀಣ ಕೃಪಾಂಕವನ್ನು ಹೊರತುಪಡಿಸಿದರೂ ಮೆರಿಟ್ ಆಧಾರದ ಮೇಲೆ ನೇಮಕಗೊಂಡಿರುವುದರಿಂದ ಇವರು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಇವರ ಸೇವಾ ಜೇಷ್ಠತೆಯನ್ನು ನಿಗದಿಪಡಿಸಲಾಗಿದೆ. ಆದ್ದರಿಂದ ಇವರಿಗೆ ನಿಗದಿಪಡಿಸಿದ ಸೇವಾ ಜೇಷ್ಠತೆಗೂ ಮತ್ತು ರಿಟ್‌ನಲ್ಲಿ ಹೊರಡಿಸಿದ ಆದೇಶಕ್ಕೂ ಯಾವುದೇ ಸಂಬಂಧ ಇರದ ಕಾರಣ ಇವರ ಸೇವಾ ಜೇಷ್ಠತೆಯನ್ನು ಶ್ರೀ ವಾಯ್.ಪಿ. ಪಾಟೀಲ ಇವರಿಗಿಂತ ಮೇಲಸ್ತರದಲ್ಲಿ ನಿಗದಿಪಡಿಸಿರುವುದು ಕ್ರಮಬದ್ಧವಾಗಿರುತ್ತದೆ.

ಸದರಿಯವರ ಆಕ್ಷೇಪಣೆಯ ಉಳಿದ ಕಂಡಿಕೆಗಳಲ್ಲಿ ಸಲ್ಲಿಸಿರುವ ತಕರಾರುಗಳಿಗೆ ಮೇಲ್ಕಾಣಿಸಿದ ಉತ್ತರವೇ ಆಗಿರುವುದರಿಂದ ಉಳಿದ ಕಂಡಿಕೆಯ ತಕರಾರುಗಳನ್ನು ಕಡತಕ್ಕೆ ಸೇರಿಸಲಾಗಿದೆ.

2. ಶ್ರೀ ಡಿ. ಎಂ. ರೋಣ, ಶಿರಸ್ತೇದಾರರು, ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಹಾನಗಲ್ಲ ಇವರ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿ ಇವರು ದಿನಾಂಕ 3-6-2013 ರಂದು ಪ್ರ.ದ.ಸ ಹುದ್ದೆಯಿಂದ ಶಿರಸ್ತೇದಾರ ಹುದ್ದೆಗೆ ಬಡ್ತಿ ಹೊಂದಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಈಗ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪಿಲ್ ಸಂಖ್ಯೆ 2368/2011 ದಿನಾಂಕ 9-2-2017 ರ ಪ್ರಕಾರ ಪರಿಷ್ಕೃತ ಜೇಷ್ಠತಾ ಪಟ್ಟಿಯ ಪ್ರಕಾರ ಶ್ರೀ ಎಂ. ಎನ್. ಶೇಜೆಕರ ದಿನಾಂಕ 31-1-2012 ರಂದು ನಿವೃತ್ತಿಯಾಗಿದ್ದು, ಆದ್ದರಿಂದ ಸದರಿಯವರ ಸಂಭಾವ್ಯ ಪದೋನ್ನತಿ ದಿನಾಂಕ 1-2-2012 ಕ್ಕೆ ನಿಗದಿಪಡಿಸಲಾಗಿದೆ. ಇದು ಕ್ರಮಬದ್ಧವಾಗಿರುತ್ತದೆ. ಮಾನ್ಯ ಸರ್ವೋಚ್ಛ ನ್ಯಾಯಾಲಯವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಠ ಪಂಗಡ ನೌಕರರ ಮೀಸಲಾತಿ ರದ್ದುಪಡಿಸಿ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ನಿರ್ದೇಶಿಸಿರುತ್ತದೆ.

ಅದರಂತೆ ಇವರು ಪ್ರ.ದ.ಸ ಹುದ್ದೆಯಲ್ಲಿ ಶ್ರೀ ಎಸ್. ಎಂ. ಬೇನಾಳ, ಶ್ರೀ ಎಂ. ಡಿ. ಕನವಳ್ಳಿ, ಶ್ರೀ ಎ. ಆರ್. ಜೋಗಣ್ಣವರ ಇವರುಗಳ ಮೀಸಲಾತಿ ರದ್ದು ಪಡಿಸಿ ಪರಿಷ್ಕೃತ ಜೇಷ್ಠತಾ ಪಟ್ಟಿ ಸಿದ್ದಪಡಿಸಿದಾಗ ಸದರಿ ಸಿಬ್ಬಂದಿಯ ಪರಿಷ್ಕೃತ ಜೇಷ್ಠತೆಯು 101 ರಿಂದ 98 ಕ್ಕೆ ಮೇಲಸ್ತರವಾಗಿರುತ್ತದೆ. ಕಾಲಾನುಸಾರ ಪ್ರಕಟಿಸಿದ ಹಿಂದಿನ ಜೇಷ್ಠತಾ ಪಟ್ಟಿಯ ಪ್ರ.ದ.ಸ ಹುದ್ದೆಯ ಕ್ರಮ ಸಂಖ್ಯೆ 98 ಮತ್ತು 101 ರ ನೌಕರರು ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ ಆದೇಶ ಸಂಖ್ಯೆ 57/2010 ದಿನಾಂಕ 17-6-2010 ರಂದು ಏಕಕಾಲಕ್ಕೆ ಪದೋನ್ನತಿ ಹೊಂದಿದ್ದು, ಅವರ ಸಂಭಾವ್ಯ ಪದೋನ್ನತಿ ದಿನಾಂಕಗಳು ಸರಿಸುಮಾರು ಒಂದೇ ಆಗಿರುತ್ತದೆ. ಆದರೆ ಪ್ರ.ದ.ಸ ಹುದ್ದೆಯ ಸಂಭಾವ್ಯ ಪದೋನ್ನತಿ ದಿನಾಂಕ ನಿಗದಿಪಡಿಸುವ ಬಗ್ಗೆ ಸದರಿ ಸಿಬ್ಬಂದಿಯು ದಿನಾಂಕ 1-1-2011ಕ್ಕೆ ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಜೇಷ್ಠತಾ ಪಟ್ಟಿಯಲ್ಲಿನ ಪ್ರ.ದ.ಸ ಮತ್ತು ಶಿರಸ್ತೇದಾರ ಹುದ್ದೆಯ ಸಂಭಾವ್ಯ ಪದೋನ್ನತಿ ದಿನಾಂಕಗಳು ಕ್ರಮಬದ್ಧವಾಗಿರುತ್ತದೆ. ಆದ್ದರಿಂದ ಸದರಿ ಸಿಬ್ಬಂದಿಯು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಗಣಿಸಿರುವುದಿಲ್ಲ ಮತ್ತು ಸದರಿಯವರು ಅಂದಾಜು ಸನ್ 2004 ರಲ್ಲಿ ಪ್ರ.ದ.ಸ. ಹುದ್ದೆಗೆ ಹಾಗೂ ಸನ್ 2007ರಲ್ಲಿ

ಶಿರಸ್ತೇದಾರರ ಹುದ್ದೆಗೆ ಪದೋನ್ನತಿಯನ್ನು ಪರಿಗಣಿಸುವ ಬಗ್ಗೆ ಯಾವುದೇ ಪೂರಕ ದಾಖಲಾತಿಗಳನ್ನು ಪೂರೈಸಿರುವುದಿಲ್ಲ.

ಸದರಿಯವರ ಆಕ್ಷೇಪಣೆಯ ಉಳಿದ ಕಂಡಿಕೆಗಳಲ್ಲಿ ಸಲ್ಲಿಸಿರುವ ತಕರಾರುಗಳಿಗೆ ಮೇಲ್ಕಾಣಿಸಿದ ಉತ್ತರವೇ ಆಗಿರುವುದರಿಂದ ಉಳಿದ ಕಂಡಿಕೆಯ ತಕರಾರುಗಳನ್ನು ಕಡತಕ್ಕೆ ಸೇರಿಸಲಾಗಿದೆ.

ಈ ನ್ಯಾಯಾಲಯದಲ್ಲಿ ಸ್ವೀಕರಿಸಿದ ಆಕ್ಷೇಪಣೆಗಳಿಗೆ ಮೇಲಿನಂತೆ ಉತ್ತರ ನೀಡಲಾಗಿದ್ದು, ಈಗ ದಿನಾಂಕ 12-10-2001 ರಿಂದ 30-9-2017 ರವರೆಗೆ ಶಿರಸ್ತೇದಾರರ ಪರಿಷ್ಕೃತ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲಾಗಿದೆ

ಉಲ್ಲೇಖ-8 ರ ನಿರ್ದೇಶನದ ಪ್ರಕಾರ ಅಂತಿಮ ಪರಿಷ್ಕೃತ ಸೇವಾ ಜೇಷ್ಠತಾ ಪಟ್ಟಿಯನ್ನು ಜಿಲ್ಲಾ ನ್ಯಾಯಾಲಯದ ಅಂತರ್ಜಾಲದಲ್ಲಿ http://ecourts.gov.in/haveri ನಲ್ಲಿ ಪ್ರಕಟಿಸಬೇಕು. ಎಲ್ಲಾ ಅಧೀನ ನ್ಯಾಯಾಲಯಗಳಿಗೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶಿರಸ್ತೇದಾರರಿಗೆ ಅಂತಿಮ ಪರಿಷ್ಕೃತ ಸೇವಾ ಜೇಷ್ಠತಾ ಪಟ್ಟಿಯನ್ನು ಕಳುಹಿಸಿ ಎಲ್ಲಾ ಶಿರಸ್ತೇದಾರರ ರುಜು ಪಡೆದುಕೊಳ್ಳಬೇಕು.

ಸಹಿ/-
**(ಈಶಪ್ಪಾ ಕೆ. ಭೂತೆ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ

**ಪ್ರತಿಯನ್ನು**

೧. ೨ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಣೇಬೆನ್ನೂರ.
೨. ಹಿರಿಯ ದಿವಾಣಿ ನ್ಯಾಯಾಲಯ, ಹಾವೇರಿ/ರಾಣೇಬೆನ್ನೂರ/ಹಾನಗಲ್ಲ/ಹಿರೇಕೆರೂರ/ಬ್ಯಾಡಗಿ.
೩. ದಿವಾಣಿ ನ್ಯಾಯಾಲಯ, ಹಾವೇರಿ/ರಾಣೇಬೆನೂರ/ಹಾನಗಲ್ಲ/ಹಿರೇಕೆರೂರ/ಬ್ಯಾಡಗಿ/ಶಿಗ್ಗಾಂವ/ಸವಣೂರ.
೪. ಕಚೇರಿ ಟಿಪ್ಪಣಿ.